**ಕರ್ನಾಟಕ ಲೋಕಾಯುಕ್ತ**

**ನಂ.ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್./2143/2021**
**ಪಿ.ಓ. ಎ.ಆರ್.ಇ-06 (ಮಂಡನಾಧಿಕಾರಿಯವರ ಶಾಖೆ.)**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ:09/02/2022.

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ**

**ವಿಷಯ: ಶ್ರೀ. ಎಂ.ಎಲ್. ರಮೇಶ್ ಬಿನ್ ಲಿಂಗೇಗೌಡ, ಮುಖ್ಯಾಧಿಕಾರಿಗಳು, ಹೊಳೆನರಸೀಪುರ ಪುರಸಭೆ, ಹಾಸನ ಜಿಲ್ಲೆ, ಆದ ನೀವು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.**

******

1) ಹಾಸನ ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆಯ ಪೋಲಿಸ್ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ. **ಎಂ.ಎಲ್. ರಮೇಶ್ ಬಿನ್ ಲಿಂಗೇಗೌಡ, ಮುಖ್ಯಾಧಿಕಾರಿಗಳು, ಹೊಳೆನರಸೀಪುರ ಪುರಸಭೆ, ಹಾಸನ ಜಿಲ್ಲೆ** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ), ಶ್ರೀ. **ಹೆಚ್.ಡಿ.ರಮೇಶ್ ಬಿನ್ ಲೇಟ್ ದ್ಯಾವಯ್ಯ, ಕಂಟ್ರ್ಯಾಕ್ಟರ್, ಅಂಬೇಡ್ಕರ್‌ನಗರ, ಹೊಸಬಡಾವಣೆ, ಕೆ.ಇ.ಬಿ. ಮುಂಭಾಗ, ಹಾಸನ-ಮೈಸೂರು ರಸ್ತೆ, ಹೊಳೆನರಸೀಪುರ, ಹಾಸನ ಜಿಲ್ಲೆ** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಅವರ ಕೆಲಸದ ನಿಮಿತ್ತ ಭೇಟಿಮಾಡಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

**2) ಪ್ರಕರಣದ ಸಂಕ್ಷಿಪ್ತ ಸಾರಾಂಶ :-**

i) ದೂರುದಾರರಾದ ಶ್ರೀ. **ಹೆಚ್.ಡಿ.ರಮೇಶ್ ಬಿನ್ ಲೇಟ್ ದ್ಯಾವಯ್ಯ** ಇವರು ಸುಮಾರು 15-20 ವರ್ಷದಿಂದ ಹೊಳೆನರಸೀಪುರ ನಗರದಲ್ಲಿ ಕಂಟ್ರ್ಯಾಕ್ಟರ್ ಕೆಲಸ ಮಾಡುತ್ತಿದ್ದು, ಸುಮಾರು 2 ವರ್ಷಗಳಿಂದ ಹೊಳೆನರಸೀಪುರ ಪುರಸಭೆಯಿಂದ ದುರಸ್ತಿ ಇರುವ ವಾಟರ್ ಟ್ಯಾಂಕ್‌ಗಳ ರಿಪೇರಿಯ ಕಂಟ್ರ್ಯಾಕ್ಟ್ ಪಡೆದು ಕಾಮಗಾರಿ ನಿರ್ವಹಿಸಿರುತ್ತಾರೆ. ಹೊಸದಾಗಿ ಚರಂಡಿ ನಿರ್ಮಿಸುವ ಬಗ್ಗೆ ಕರೆದಿದ್ದ ಟೆಂಡರ್‌ಗೆ ಅರ್ಜಿ ಹಾಕಿದ್ದು, ಆ

ಟೆಂಡರ್ ದೂರುದಾರರ ಹೆಸರಿಗೆ ಆಗಿರುತ್ತದೆ. ಅವರಿಗೆ ತಿಳಿಸಿದ ನಿಯಮದಂತೆ ಕಾಮಗಾರಿಯನ್ನು ಮುಗಿಸಿದ್ದು, ಟೆಂಡರನ್ನು ನೀಡುವಾಗ ಶೇಕಡ 5 ರಂತೆ 45,000/- ರೂ. ಹಣವನ್ನು ಡೆಪಾಸಿಟ್‌ನ್ನು ಪಡೆದುಕೊಂಡಿರುತ್ತಾರೆ. ಆ ಹಣವನ್ನು ವಾಪಸ್ಸು ಕೊಡುವಂತೆ ದಿ: 25/02/2017ರಂದು ದೂರುದಾರರು ಎದುರುದಾರರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ಡೆಪಾಸಿಟ್ ಹಣ ನೀಡಲು ಸತಾಯಿಸುತ್ತಿದ್ದು, ದೂರುದಾರರಿಗೆ ಹಣದ ಅವಶ್ಯಕತೆ ಇದ್ದುದರಿಂದ ದಿ: 10/05/2017ರಂದು ಎದುರುದಾರರನ್ನು ಭೇಟಿ ಮಾಡಿ ಅವರ ಕೆಲಸವಾದ ಡೆಪಾಸಿಟ್ ಹಣವನ್ನು ವಾಪಸ್ಸು ಕೊಡಿ ಎಂದು ಕೇಳಿದಾಗ ಎದುರುದಾರರು ಉದಾಸೀನತೆಯಿಂದ ಮಾತನಾಡಿದ್ದು, ಆನಂತರ, ಏನು ಕೊಡುತ್ತೀರಾ ಕೊಟ್ಟು ಹೋಗಿ, ಅಷ್ಟು ಇಷ್ಟು ಅಂತ ಹೇಳಲ್ಲವೆಂದು ಹೇಳಿ ದೂರುದಾರರಿಗೆ ನೀಡಬೇಕಾಗಿದ್ದ ಡೆಪಾಸಿಟ್ ಹಣವನ್ನು ವಾಪಸ್ಸು ಕೊಡುವಂತೆ ಫೆಬ್ರವರಿ 2017ರಲ್ಲಿ ಅರ್ಜಿ ಸಲ್ಲಿಸಿದ್ದರೂ ಕೂಡ ಹಾಗೆ ಇಟ್ಟುಕೊಂಡಿರುತ್ತಾರೆ. ಹಿಂದೆ ಮಾಡಿದ್ದ ಟೆಂಡರ್ ಕೆಲಸಕ್ಕೆ ಕಟ್ಟಿದ್ದ ಡೆಪಾಸಿಟ್ ಹಣವನ್ನು ವಾಪಸ್ಸು ಕೊಡುವಂತೆ ದೂರುದಾರರು ಕೇಳಿದಾಗ 10,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಆ ಹಣವನ್ನು ದೂರುದಾರರು ಕೊಟ್ಟಾಗ 100/- ರೂ. ಕಡಿಮೆ ಕೊಟ್ಟಿರುತ್ತಾರೆ. ಅದಕ್ಕೆ ಎದುರುದಾರರು ಬೇಸರಗೊಂಡಿದ್ದು, ಆಗ ದೂರುದಾರರು ಡೆಪಾಸಿಟ್ ಇರುವ 45,000/- ರೂ. ಹಣ ಕೊಟ್ಟರೆ, ಆ 100/- ರೂ.ಗಳನ್ನು ಸೇರಿಸಿ ಕೊಡುವುದಾಗಿ ತಿಳಿಸಿರುತ್ತಾರೆ. ಆಗ ಎದುರುದಾರರು ಅದೇನು ಕೊಟ್ಟು ಚೆಕ್‌ನ್ನು ತೆಗೆದುಕೊಂಡು ಹೋಗು ಎಂದಿದ್ದು, ಆಗ ದೂರುದಾರರು ಅವರ ಮೊಬೈಲ್‌ನಲ್ಲಿ ಎದುರುದಾರರ ಮತ್ತು ಅವರ ನಡುವೆ ನಡೆದ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿರುತ್ತಾರೆ. ಎದುರುದಾರರು ಒತ್ತಾಯ ಪೂರ್ವಕವಾಗಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರಿಂದ, ದೂರುದಾರರು ದಿ: 12/05/2017 ರಂದು ಹಾಸನ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಆರಕ್ಷಕ ಉಪಾಧೀಕ್ಷಕರಿಗೆ ದೂರನ್ನು ಸಲ್ಲಿಸಿದ್ದು, ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ.05/2017 ರಲ್ಲಿ ಕಲಂ 7, 13(1) (ಡಿ) ಸಹಿತ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿ: 12/05/2017ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಸಮಯದಲ್ಲಿ ಇಬ್ಬರು ಪಂಚರನ್ನು ಠಾಣೆಗೆ ಕರೆಯಿಸಿ,

ದೂರುದಾರರನ್ನು ಪರಿಚಯಿಸಿ, ಪಂಚರಿಗೆ ದೂರಿನ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ ನಂತರ, ಪಂಚಸಾಕ್ಷಿದಾರರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿರುತ್ತಾರೆ. ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿದ್ದ ಸಂಭಾಷಣೆಯ ಮೊಬೈಲ್‌ನ್ನು ಹಾಜರುಪಡಿಸಿದ್ದು, ಆ ಮೊಬೈಲ್‌ನಲ್ಲಿದ್ದ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ ಮತ್ತು ಸದರಿ ಸಂಭಾಷಣೆಯನ್ನು ಕಂಪ್ಯೂಟರ್ ಮೂಲಕ ಸಿ.ಡಿ.ಗೆ ವರ್ಗಾಯಿಸಿ, ಸಿ.ಡಿ.ಯನ್ನು ಮತ್ತು ಮೆಮೊರಿ ಕಾರ್ಡ್‌ನ್ನು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರ ಮುಂದೆ ಎದುರುದಾರರಿಗೆ ಲಂಚದ ಹಣವಾಗಿ ನೀಡಬೇಕಾಗಿರುವ 5,000/- ರೂ. (2,000/- ರೂ. ಮುಖಬೆಲೆಯ 2 ನೋಟು ಮತ್ತು 500/- ರೂ. ಮುಖಬೆಲೆಯ 2 ನೋಟು) ಗಳನ್ನು ದೂರುದಾರರು ಹಾಜರುಪಡಿಸಿದ್ದು, ತನಿಖಾಧಿಕಾರಿಯವರ ಸೂಚನೆಯಂತೆ ಪಂಚಸಾಕ್ಷಿ-2ರವರು ನೋಟುಗಳ ವಿವರಗಳನ್ನು ಹೇಳಿದಂತೆ ಪಂಚಸಾಕ್ಷಿ-1ರವರು ಹಾಳೆಯಲ್ಲಿ ಮತ್ತು ಸಿಬ್ಬಂದಿ ಪಂಚನಾಮೆಯಲ್ಲಿ ನಮೂದಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯ ಸೂಚನೆಯಂತೆ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿದ ನಂತರ, ಪಂಚಸಾಕ್ಷಿ-1ರವರು ಸದರಿ ನೋಟುಗಳನ್ನು ದೂರುದಾರರ ಪ್ಯಾಂಟಿನ ಹಿಂಭಾಗದ ಬಲಜೇಬಿನಲ್ಲಿ ಇಟ್ಟಿರುತ್ತಾರೆ. ತನಿಖಾಧಿಕಾರಿಯು ದೂರುದಾರರಿಗೆ ಧ್ವನಿಮುದ್ರಕವನ್ನು ನೀಡಿ ಎದುರುದಾರರ ಬಳಿಹೋಗುವಾಗ ಚಾಲನಾ ಸ್ಥಿತಿಯಲ್ಲಿಟ್ಟುಕೊಳ್ಳುವಂತೆ ಮತ್ತು ದೂರುದಾರರ ಮೊಬೈಲ್‌ನಿಂದಲೂ ಆಡಿಯೋ ವಿಡಿಯೋ ಮಾಡಿಕೊಳ್ಳುವಂತೆ ತಿಳಿಸಿದಲ್ಲದೇ, ಎದುರುದಾರರ ಬಳಿಹೋಗಿ ನಿಮ್ಮ ಕೆಲಸದ ಬಗ್ಗೆ ವಿಚಾರಿಸಿ, ಆಗ ಎದುರುದಾರರು ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಲ್ಲಿ ಪುಡಿಲೇಪಿತ ನೋಟುಗಳನ್ನು ನೀಡಬೇಕೆಂದು, ನಂತರ ಎದುರುದಾರರು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂದು ತಿಳಿದುಕೊಂಡು ನಿಮ್ಮ ಬಲಗೈನಿಂದ ತಲೆ ಸವರಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ಮತ್ತು ನೆರಳುಸಾಕ್ಷಿಗೆ ದೂರುದಾರರ ಜೊತೆ ಹೋಗಿ ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿರುತ್ತಾರೆ. ಇತರೆ ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳುಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

iii) ದಿನಾಂಕ 12/05/2017ರಂದು ದೂರುದಾರರು, ನೆರಳುಸಾಕ್ಷಿ ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಗಳು ಎದುರುದಾರರ ಕಚೇರಿ ಬಳಿ ಬಂದಿರುತ್ತಾರೆ. ತನಿಖಾಧಿಕಾರಿಯು ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಮತ್ತೊಮ್ಮೆ ಸೂಚನೆಗಳನ್ನು ನೆನಪಿಸಿ, ಎದುರುದಾರರ ಬಳಿ ಕಳುಹಿಸಿದ್ದು, ಅವರು ಎದುರುದಾರರ ಕಚೇರಿಗೆ ಬಂದಾಗ, ಎದುರುದಾರರು ಊಟಕ್ಕೆ ಹೋಗಿರುವುದಾಗಿ ಕಚೇರಿ ಸಿಬ್ಬಂದಿ ತಿಳಿಸಿರುತ್ತಾರೆ. ದೂರುದಾರರು ಮತ್ತು ನೆರಳುಸಾಕ್ಷಿ ಎದುರುದಾರರಿಗೋಸ್ಕರ ಕಚೇರಿ ಬಳಿ ಕಾಯುತ್ತಿರುವಾಗ, ಎದುರುದಾರರು ಸಂಜೆ ಸುಮಾರು 5.15 ಗಂಟೆಗೆ ಕಚೇರಿಗೆ ಬಂದಿದ್ದು, ಆ ಸಮಯದಲ್ಲಿ ಎದುರುದಾರರನ್ನು ಕಾಣಲು ಸಾರ್ವಜನಿಕರಿದ್ದು ಅವರು ಹೊರಬಂದ ನಂತರ, ನೆರಳುಸಾಕ್ಷಿಯೊಂದಿಗೆ ದೂರುದಾರರು ಸುಮಾರು ಸಂಜೆ 5.30ರ ಸಮಯದಲ್ಲಿ ಅವರ ಕೆಲಸದ ಬಗ್ಗೆ ಎದುರುದಾರರನ್ನು ಭೇಟಿಮಾಡಿದಾಗ ಎದುರುದಾರರು "ಏನಯ್ಯ, ನೀನು ಬರಲೇ ಇಲ್ಲಯ್ಯ ಎಂದು ಕೈಸನ್ನೆ ಮೂಲಕ ಲಂಚದ ಹಣ ಕೇಳಿದಾಗ" ದೂರುದಾರರು ತಗೊಳ್ಳಿ ಸಾರ್ ಎಂದು ಎದುರುದಾರರು ಬೇಡಿಕೆ ಇಟ್ಟ ಹಣವನ್ನು ನೀಡುತ್ತಿದ್ದಾಗ ಕಚೇರಿಯ ಸಿಬ್ಬಂದಿಗಳು ಮತ್ತು ಸಾರ್ವಜನಿಕರು ಒಳಬಂದಿದ್ದರಿಂದ, ದೂರುದಾರರಿಗೆ ಹಣವನ್ನು ಟೇಬಲ್ ಮೇಲೆ ಇಡು ಎಂದು ಎದುರುದಾರರು ಕಣ್ ಸೂಚನೆ ನೀಡಿದ ಮೇರೆಗೆ ದೂರುದಾರರು ಹಣವನ್ನು ಟೇಬಲ್ ಮೇಲೆ ಇಟ್ಟು ಅಲ್ಲೇ ನಿಂತಿದ್ದಾಗ, ಎದುರುದಾರರು ಹಣವನ್ನು ತೆಗೆದು ಫೈಲ್ ಇಡುವ ಟ್ರೇನಲ್ಲಿ ಇಟ್ಟುಕೊಂಡಿದ್ದು, ನಂತರ ಸಿಬ್ಬಂದಿ ಮತ್ತು ಸಾರ್ವಜನಿಕರು ಹೊರಹೋದ ನಂತರ ಆ ಹಣವನ್ನು ಎರಡೂ ಕೈಗಳಲ್ಲಿ ಎಣಿಸಿ ಎಡಗೈನಿಂದ ಪ್ಯಾಂಟಿನ ಎಡಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ನೆರಳುಸಾಕ್ಷಿಯೊಂದಿಗೆ ಹೊರಬಂದು ದೂರುದಾರರು ಬಲಗೈನಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ಸನ್ನೆ ಮಾಡಿರುತ್ತಾರೆ. ಆಗ ತನಿಖಾಧಿಕಾರಿಗಳು, ಪಂಚಸಾಕ್ಷಿ ಮತ್ತು ಸಿಬ್ಬಂದಿಗಳೊಂದಿಗೆ ಧಾವಿಸಿ ಎದುರುದಾರರ ಕಚೇರಿಗೆ ಬರುತ್ತಿದ್ದಾಗ ಎದುರುದಾರರು ಕಚೇರಿಯ ಕೆಲಸವನ್ನು ಮುಗಿಸಿಕೊಂಡು ಪುರಸಭೆಯ ಕಚೇರಿ ಮುಂಭಾಗ ಬಂದಾಗ ದೂರುದಾರರು ತೋರಿಸಿದ ಎದುರುದಾರರನ್ನು ವಶಕ್ಕೆ ಪಡೆದು, ಅವರಿಗೆ ಗುರುತಿನ ಚೀಟಿಯನ್ನು ತೋರಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ತನಿಖಾಧಿಕಾರಿಯು ಸಿಬ್ಬಂದಿ ಮುಖಾಂತರ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಸದರಿ ದ್ರಾವಣವನ್ನು ಎರಡು ಬಟ್ಟಲುಗಳಲ್ಲಿ

ತೆಗೆದುಕೊಂಡು, ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳಿಸಿದಾಗ, ಆ ದ್ರಾವಣವು ನಸುಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳಿಸಿದಾಗ, ಆ ದ್ರಾವಣವು ನಸುಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಆ ಎರಡೂ ದ್ರಾವಣಗಳನ್ನು ಪ್ರತ್ಯೇಕವಾಗಿ ತನಿಖಾಧಿಕಾರಿಯು ವಶಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಎದುರುದಾರರಿಗೆ ದೂರುದಾರರಿಂದ ಪಡೆದ ಹಣವನ್ನು ಹಾಜರುಪಡಿಸುವಂತೆ ತಿಳಿಸಿದಾಗ ಎದುರುದಾರರು ಅವರ ಪ್ಯಾಂಟಿನ ಎಡಭಾಗದ ಜೇಬಿನಲ್ಲಿ ಇಟ್ಟುಕೊಂಡಿದ್ದ 2,000/- ರೂ. ಮೌಲ್ಯದ ಎರಡು ನೋಟುಗಳು, 500/- ರೂ. ಮೌಲ್ಯದ ಎರಡು ನೋಟುಗಳನ್ನು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆಯಂತೆ ಪಂಚಸಾಕ್ಷಿ-1ರವರು ಆ ನೋಟುಗಳ ವಿವರಗಳು ಹಾಳೆಯಲ್ಲಿ ಮತ್ತು ಪಂಚನಾಮೆಯಲ್ಲಿ ನಮೂದಿಸಿದ ನೋಟುಗಳ ವಿವರಗಳಿಗೆ ತಾಳೆಯಾದ್ದರಿಂದ, ಆ ನೋಟುಗಳನ್ನು ತನಿಖಾಧಿಕಾರಿಯು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯು ಎದುರುದಾರರಿಗೆ ಬದಲಿ ಪ್ಯಾಂಟಿನ ವ್ಯವಸ್ಥೆ ಮಾಡಿ, ಎದುರುದಾರರು ಧರಿಸಿದ್ದ ಪ್ಯಾಂಟನ್ನು ಪಡೆದು, ಆ ಪ್ಯಾಂಟಿನ ಎಡಭಾಗದ ಜೇಬನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಅದ್ದಿಸಿದಾಗ, ಆ ದ್ರಾವಣವು ನಸುಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ದ್ರಾವಣವನ್ನು ಮತ್ತು ಪ್ಯಾಂಟನ್ನು ಸಹ ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ಎದುರುದಾರರು ಲಂಚಕ್ಕಾಗಿ ಒತ್ತಾಯಿಸಿದ ಸಂಭಾಷಣೆಯ ಸಿ.ಡಿ.ಯನ್ನು ಲ್ಯಾಪ್‌ಟಾಪ್ ಮೂಲಕ ಆನ್ ಮಾಡಿ ಎದುರುದಾರರ ಕಚೇರಿಯ ಮ್ಯಾನೇಜರ್ ಆದ ಶ್ರೀಮತಿ. ವಿ.ಡಿ. ಶಾಂತಲಾರವರಿಗೆ ಕೇಳಿಸಿದಾಗ ಅವರು ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ "ಮಾನ್ಯರೇ, ನನ್ನ ಬಳಿ ಯಾವುದೇ ಹಣ ಕೊಟ್ಟಿರುವುದಿಲ್ಲ. ಇದೆಲ್ಲಾ ಸುಳ್ಳು. ಈ ಸಮಯದಲ್ಲಿ ನನಗೇನೂ ಗೊತ್ತಾಗುತ್ತಿಲ್ಲ" ವೆಂದು ಬರೆದುಕೊಟ್ಟಿರುತ್ತಾರೆ. ತನಿಖಾಧಿಕಾರಿಯು ಎದುರುದಾರರ ಮಾದರಿ ಧ್ವನಿಯನ್ನು ಮತ್ತು ದೂರುದಾರರ ಮಾದರಿ ಧ್ವನಿಯನ್ನು ಪಡೆದು, ಆ ಇಬ್ಬರ ಮಾದರಿ ಧ್ವನಿಯನ್ನು ಲ್ಯಾಪ್‌ಟಾಪ್ ಮೂಲಕ ಪ್ರತ್ಯೇಕವಾಗಿ ಸಿ.ಡಿ.ಗಳಿಗೆ ವರ್ಗಾಯಿಸಿರುತ್ತಾರೆ. ಆ ಸಿ.ಡಿ.ಗಳನ್ನು ತನಿಖಾಧಿಕಾರಿಯು ವಶಕ್ಕೆ ಪಡೆದು ಎದುರುದಾರರನ್ನು ದಸ್ತಗಿರಿಮಾಡಿ ಎಲ್ಲರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ಜರುಗಿಸಿರುತ್ತಾರೆ. ರಾಸಾಯನಿಕ

ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಯು ಸಂಗ್ರಹಿಸಿದ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಅಂಶವಿರುವುದು ಕಂಡುಬಂದಿರುತ್ತದೆ. ಆ ಕಾರಣ, ಎದುರುದಾರರು ನೀಡಿದ ಸಮಜಾಯಿಷಿಯು ತೃಪ್ತಿದಾಯಕವಾಗಿರುವುದಿಲ್ಲ. ತನಿಖಾಧಿಕಾರಿಯು ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳನ್ನು ಮತ್ತು ತಜ್ಞರ ವರದಿಯನ್ನು ಹಾಗೂ ಅಭಿಯೋಜನಾ ಮಂಜೂರಾತಿಯನ್ನು ಪಡೆದು, ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3) ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ದಿ: 23/11/2021ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ಎದುರುದಾರರು ಅವರ ಸಮಜಾಯಿಷಿಯ ಪ್ಯಾರಾ-25ರಲ್ಲಿ ಇದೆ ವಿಷಯಕ್ಕೆ ಸಂಬಂಧಿಸಿದಂತೆ ಹಾಸನ ಪ್ರಧಾನ ಜಿಲ್ಲಾ ವಿಶೇಷ ನ್ಯಾಯಾಲಯದಲ್ಲಿ ವಿಶೇಷ ಪ್ರಕರಣ ಸಂ.291/2018 ನಡೆಯುತ್ತಿದೆ, ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ನಡೆಯುತ್ತಿರುವುದರಿಂದ ಒಂದೇ ಸಾಕ್ಷಿ ಪುರಾವೆಗಳು ಇದ್ದಲ್ಲಿ ಇಲಾಖಾ ವಿಚಾರಣೆ ಮೊದಲು ನಡೆದಾಗ ತೆಗೆದುಕೊಂಡಿರುವ ಸಂರಕ್ಷಣೆಯ ಅಂಶಗಳು ಅಡ್ಡಿಯಾಗುತ್ತವೆ ಎಂದು ಆ ಕಾರಣ, ಕ್ರಿಮಿನಲ್ ತೀರ್ಮಾನವಾಗುವವರೆಗೂ ನನ್ನ ಮೇಲಿನ ಇಲಾಖಾ ವಿಚಾರಣೆಯನ್ನು ಮುಂದುವರೆಸದಂತೆ ತಡೆಹಿಡಿಯಬೇಕೆಂದು ಮತ್ತು ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಯು ಎದುರುದಾರರಿಂದ ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಅಂಶವಿರುವುದು ಕಂಡುಬಂದಿರುತ್ತದೆ. ಆ ಕಾರಣದಿಂದ ಎದುರುದಾರರು ನೀಡಿದ ಸಮಜಾಯಿಷಿಯು ಸಮರ್ಪಕವಾಗಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಮತ್ತು ಎದುರುದಾರರ ಸಮಜಾಯಿಷಿಯ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4) ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5) ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14 (ಎ) ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಹಾಗೂ ಎದುರುದಾರರು ದಿನಾಂಕ 31/05/2020 ರಂದು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ ಕೆ.ಸಿ.ಎಸ್.ಆರ್. ನಿಯಮ 214 (2)(ಬಿ)(1) ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಬೇಕೆಂದು ಕೋರಿ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

14/2/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.